# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2193 (1882) |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |
| ಉತ್ತರಿಸುವ ದಿನಾಂಕ | : | 31.03.2020. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಯನ್ನು ಸ್ಥಾಪಿಸುವ ಸಂದರ್ಭದಲ್ಲಿ 75% ಉದ್ಯೋಗವನ್ನು ಸ್ಥಳೀಯ ಕನ್ನಡಿಗರಿಗೆ ನೀಡುವ ಕುರಿತು ಸರ್ಕಾರದ ನಿಲುವೇನು; | ಡಾಃ ಸರೋಜಿನಿ ಮಹಿಷಿ ವರದಿಯ ಪ್ರಕಾರ ರಾಜ್ಯದಲ್ಲಿ ಚಾಲ್ತಿಯಲ್ಲಿರುವ 50ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ ಎ ಮತ್ತು ಬಿ ವರ್ಗಗಳಲ್ಲಿ ಕ್ರಮವಾಗಿ ಶೇಕಡ 65 ಮತ್ತು ಶೇ. 80 ಹಾಗೂ ಸಿ ಮತ್ತು ಡಿ ವರ್ಗಗಳಲ್ಲಿ ಶೇ. 100 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ಒದಗಿಸುವ ಬಗ್ಗೆ ಕ್ರಮ ವಹಿಸಬೇಕಾಗಿರುತ್ತದೆ.<br><br>ಅಲ್ಲದೆ, ಕೈಗಾರಿಕಾ ನೀತಿ 2014-19 ರನ್ವಯ ಸರ್ಕಾರದಿಂದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕಾ ಘಟಕಗಳು "ಡಿ" ವರ್ಗದ ಉದ್ಯೋಗಗಳಲ್ಲಿ ಶೇಕಡ 100 ರಷ್ಟು ಹಾಗೂ ಘಟಕದ ಒಟ್ಟಾರೆ ಉದ್ಯೋಗಗಳಲ್ಲಿ ಶೇಕಡ 70 ರಷ್ಟನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನೀಡುವ ನಿಬಂಧನೆ ಇದ್ದು ಅದರಂತೆ ಉದ್ಯೋಗಗಳನ್ನು ನೀಡಿದ ಘಟಕಗಳಿಗೆ ಮಾತ್ರ ಅರ್ಹ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡಲಾಗುತ್ತಿದೆ. |
| ಆ | ಕನ್ನಡ ನಾಡಿನ ಭೂಮಿ, ನೀರು, ಮೂಲಭೂತ ಸೌಕರ್ಯಗಳನ್ನು ಬಳಸುತ್ತಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಸ್ಥಳೀಯ ಕನ್ನಡಿಗರಿಗೆ ಉದ್ಯೋಗ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಉದ್ಯೋಗ ನೀಡದಿರುವ ಕೈಗಾರಿಕೆಗಳ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು; | ಡಾಃ ಸರೋಜಿನಿ ಮಹಿಷಿ ವರದದಿಯನ್ವಯ ರಾಜ್ಯದಲ್ಲಿ ಚಾಲ್ತಿಯಲ್ಲಿರುವ 50ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ ಕೈಗಾರಿಕಾ ಘಟಕಗಳಲ್ಲಿ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗಗಳನ್ನು ಒದಗಿಸುವಂತೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳು ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಹೊಸ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಒಪ್ಪಿಗೆಯನ್ನು ನೀಡುವ ಸಂದರ್ಭದದಲ್ಲಿ ಷರತ್ತನ್ನು ವಿಧಿಸಲಾಗುತ್ತಿದೆ. ಸದರಿ ವರದಿಯನ್ವಯ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗ ನೀಡಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಕ್ರೋಢೀಕರಿಸಿ ಪರಿಶೀಲಿಸಿ ನಿರ್ದೇಶನಲಯಕ್ಕೆ ಸಲ್ಲಿಸಲಾಗುತ್ತಿದೆ.<br><br>ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಸದರಿ ಮಾಹಿತಿಯನ್ನು ಪರಿಶೀಲಿಸಲಾಗುತ್ತದೆ. ನ್ಯೂನತೆಗಳು ಕಂಡು ಬಂದ ಕೈಗಾರಿಕೆಗಳಿಗೆ ಕೂಡಲೇ ಸರಿಪಡಿಸಲು ಸೂಚನೆಗಳನ್ನು ನೀಡಲಾಗುತ್ತದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| ಇ | ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಬೃಹತ್ ಕೈಗಾರಿಕೆಗಳು ಸ್ಥಾಪನೆಯಾಗಿದೆ; ಈ ಕೈಗಾರಿಕೆಗಳಲ್ಲಿ ಎಷ್ಟು ಸ್ಥಳೀಯರಿಗೆ ಉದ್ಯೋಗ ದೊರೆತಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಡಿಸೆಂಬರ್ 2019ರ ತ್ರೈಮಾಸಿಕ ಅಂತ್ಯಕ್ಕೆ ಡಾಃ ಸರೋಜಿನಿ ಮಹಿಷಿ ವರದಿಯನ್ವಯ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿ ಕ್ರೋಢೀಕರಿಸಿರುವ ಮಾಹಿತಿಯಂತೆ ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ (2018–19 ಮತ್ತು 2019–20) ಸ್ಥಾಪನೆಯಾದ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಉತ್ಪಾದನಾ ವಲಯದ ಬೃಹತ್ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ/ ಸ್ಥಳೀಯರಿಗೆ ಉದ್ಯೋಗ ನೀಡಿರುವ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ನೀಡಿದೆ. |

**ಸಿಐ 111 ಎಸ್‌ಪಿಐ 2020**

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್ ರವರ ಪ್ರಶ್ನೆ ಸಂಖ್ಯೆ 1882(2193)ರ ಉತ್ತರಕ್ಕೆ ಅನುಬಂಧ

### ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಸ್ಥಾಪನೆಯಾದ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗ ನೀಡಿರುವ ಜಿಲ್ಲಾವಾರು ಮಾಹಿತಿ

| ಕ್ರಮ ಸಂ | ವಿವರ | ಎ–ವರ್ಗ | | | | ಬಿ–ವರ್ಗ | | | | ಸಿ–ವರ್ಗ | | | | ಡಿ–ವರ್ಗ | | | | ಒಟ್ಟು | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಸ್ಥಳೀಯರು | ಇತರೆ | ಒಟ್ಟು | ಶೇಕಡ | ಸ್ಥಳೀಯರು | ಇತರೆ | ಒಟ್ಟು | ಶೇಕಡ | ಸ್ಥಳೀಯರು | ಇತರೆ | ಒಟ್ಟು | ಶೇಕಡ | ಸ್ಥಳೀಯರು | ಇತರೆ | ಒಟ್ಟು | ಶೇಕಡ | ಸ್ಥಳೀಯರು | ಇತರೆ | ಒಟ್ಟು | ಶೇಕಡ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| | ಬೆಂಗಳೂರು ಗ್ರಾಮಾಂತರ ಜಿಲ್ಲೆ | | | | | | | | | | | | | | | | | | | | |
| 1) | ಮುಸಾಷಿ ಆಟೋ ಪಾರ್ಟ್ಸ್ ಪ್ರೈ.ಲಿ ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯಾ, ದೊಡ್ಡಬಳ್ಳಾಪುರ | 3 | 7 | 10 | 30 | 8 | 13 | 31 | 58 | 65 | 47 | 112 | 58 | 449 | 115 | 564 | 80 | 535 | 182 | 717 | 75 |
| 2) | ಕೆಹಿನ್ ಫೈ ಪ್ರೈವೇಟ್ ಲಿ., 3ನೇ ಹಂತ, ಕೈಗಾರಿಕಾ ಪ್ರದೇಶ, ದೊಡ್ಡಬಳ್ಳಾಪುರ | 3 | 1 | 4 | 75 | 4 | 2 | 6 | 67 | 10 | 3 | 13 | 77 | 25 | 5 | 30 | 83 | 42 | 11 | 53 | 79 |
| 3) | ಸ್ಪೆರಾಗ್ ಕರ್ಟ್ ಮೆಷಿನ್ ಟೂಲ್ಸ್ ಪ್ರೈ.ಲಿ, ಏರೋಸ್ಪೇಸ್ ಪಾರ್ಕ್, ದೇವನಹಳ್ಳಿ | 1 | 0 | 1 | 100 | 10 | 3 | 13 | 77 | 17 | 2 | 19 | 89 | 0 | 0 | 0 | 0 | 28 | 5 | 33 | 85 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 |
|---|---|---|---|---|---|---|---|---|---|---|---|---|---|---|---|---|---|---|---|---|---|
| 4) | ವಿಪ್ರೊ ಲಿಮಿಟೆಡ್, ಏರೋಸ್ಪೇಸ್ ಪಾರ್ಕ್, ದೇವನಹಳ್ಳಿ | 1 | 0 | 1 | 100 | 9 | 1 | 10 | 90 | 35 | 5 | 40 | 87 | 43 | 0 | 43 | 100 | 88 | 6 | 94 | 94 |
| 5) | ಆಮ್ ಡಾ (ಇಂಡಿಯಾ) ಪ್ರೈ ಲಿಮಿಟೆಡ್, ಏರೋಸ್ಪೇಸ್ ಪಾರ್ಕ್, ಕೈಗಾರಿಕಾ ಪ್ರದೇಶ, ದೇವನಹಳ್ಳಿ | 1 | 0 | 1 | 100 | 15 | 4 | 19 | 79 | 38 | 9 | 47 | 81 | 17 | 1 | 18 | 94 | 71 | 14 | 85 | 84 |
| | **ವಿಜಯಪುರ ಜಿಲ್ಲೆ** | | | | | | | | | | | | | | | | | | | | |
| 6) | ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಸಾ: ಮರಗೂರ ತಾ: ಇಂಡಿ ಜಿ: ವಿಜಯಪುರ | 6 | 1 | 7 | 86 | 35 | 0 | 35 | 100 | 47 | 0 | 47 | 100 | 162 | 0 | 162 | 100 | 250 | 1 | 251 | 89 |
| | **ಕಲಬುರಗಿ ಜಿಲ್ಲೆ** | | | | | | | | | | | | | | | | | | | | |
| 7) | ಶ್ರೀ ಸಿಮೆಂಟ್ ಲಿಮಿಟೆಡ್ ಬೆನಕನಹಳ್ಳಿ ಗ್ರಾಮ, ಕೋಡ್ಲಾ ತಾ:ಸೇಡಂ ಜಿ:ಕಲಬುರಗಿ | 4 | 2 | 6 | 67 | 46 | 10 | 56 | 82 | 227 | 0 | 227 | 100 | 670 | 0 | 670 | 100 | 947 | 12 | 959 | 99 |
| | **ದಕ್ಷಿಣ ಕನ್ನಡ ಜಿಲ್ಲೆ** | | | | | | | | | | | | | | | | | | | | |
| 8) | ಜೆ.ಬಿ.ಎಫ್ ಪೆಟ್ರೋಕೆಮಿಕಲ್ಸ್ ಲಿ., ಮಂಗಳೂರು ತಾಲ್ಲೂಕು | 14 | 4 | 18 | 78 | 51 | 5 | 56 | 91 | 100 | 0 | 100 | 100 | 42 | 0 | 42 | 100 | 207 | 9 | 216 | 96 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 |
|---|---|---|---|---|---|---|---|---|---|---|---|---|---|---|---|---|---|---|---|---|---|
| | **ರಾಮನಗರ ಜಿಲ್ಲೆ** | | | | | | | | | | | | | | | | | | | | |
| 9) | ಆಂತೆಮ್ ಬಯೋ ಸೈನ್ಸ್ ಪ್ರೈ.ಲಿ., ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶ, 2ನೇ ಹಂತ, ಕನಕಪುರ ತಾಲ್ಲೂಕು | 26 | 4 | 30 | 87 | 118 | 35 | 153 | 77 | 70 | 0 | 70 | 100 | 6 | 0 | 6 | 100 | 220 | 39 | 259 | 85 |
| 10) | ಎಂ.ಕೆ.ಆಗ್ರೋಟೆಕ್ ಪ್ರೈ.ಲಿ., ಎಂ.ಬಿ. ರಸ್ತೆ, ಶ್ರೀರಂಗಪಟ್ಟಣ ಸೋಲೂರು ಗ್ರಾಮ, ಮಾಗಡಿ ತಾಲ್ಲೂಕು, ರಾಮನಗರ. | 1 | 0 | 1 | 100 | 3 | 1 | 4 | 75 | 8 | 2 | 10 | 80 | 8 | 2 | 10 | 80 | 20 | 5 | 25 | 80 |